MANGALORE MARKET REPORTS
MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 28-12-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 4 ವಾರಗಳ ಗರಿಷ್ಠ ಮಟ್ಟಕ್ಕೆ

ಚೀನಾದ ಕೋವಿಡ್ ನಿರ್ಬಂಧ ಸಡಿಲಿಕೆಯಾಗಿ ಅಲ್ಲಿಂದ ಹೆಚ್ಚಿನ ಬೇಡಿಕೆ ಬರುವ ನಿರೀಕ್ಷೆಯಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 2ನೇ ಅವಧಿಗೆ ಹೆಚ್ಚಳ ಕಂಡು 0.44 ಶೇಕಡಾ ಹೆಚ್ಚಳ, ಟನ್‌ಗೆ 4118 ರಿಂಗಿಟ್ಸ್ ($ 928.50) ಆಗಿದೆ.

### ಸಕ್ಕರೆ ದರ ದುರ್ಬಲ

ಉತ್ತರ ಭಾರತದಲ್ಲಿ ದುರ್ಬಲ ಬೇಡಿಕೆ, ಹೊಸ ಬೆಳೆಯ ಉತ್ಪಾದನೆ, ತಿಂಗಳ ಮಾರಾಟ ಕೋಟಾ ತೀರಿಸಲು ಕಾರ್ಖಾನೆ ಗಳಿಂದ ಒತ್ತಡದ ಮಾರಾಟ ಇವುಗಳಿಂದ ಒತ್ತಡದ ಮಾರಾಟ ಇವುಗಳಿಂದ ಉತ್ತರಭಾರತದಲ್ಲಿ ಸಕ್ಕರೆ ದರ ದುರ್ಬಲವಾಗಿದೆ. ಹಾಗೂ ಇಳಿಕೆಯಾಗಿದೆ. ಮಹಾರಾಷ್ಟ್ರ ಹಾಗೂ ದಕ್ಷಿಣ ಭಾರತದಲ್ಲಿ ದರ ಸ್ಥಿರದಿಂದ ದುರ್ಬಲವಾಗಿದೆ.

### ಗೋಧಿ ಬಿತ್ತನೆ ಹೆಚ್ಚಳ

2022-23 ರಲ್ಲಿ ಭಾರತದ ರಾಬಿ ಬಿತ್ತನೆ 4.4 ಶೇಕಡಾ ಹೆಚ್ಚಳವಾಗಿ 620.62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಗೋಧಿ ಬಿತ್ತನೆ ಪ್ರದೇಶ ಹಿಂದಿನ ವರ್ಷದ ಈ ಅವಧಿಗಿಂತ 9.65 ಲಕ್ಷ ಹೆಕ್ಟೇರ್ ಹೆಚ್ಚಳವಾಗಿ 312.26 ಲಕ್ಷ ಹೆಕ್ಟೇರ್ ಗಳಾಗಿವೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 304.47 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. ಒಟ್ಟು ರಾಬಿ ಬೆಳೆಯ ಬಿತ್ತನೆ ಪ್ರದೇಶ ಹಿಂದಿನ ವರ್ಷದ ಇದೇ ಅವಧಿಯಲ್ಲಿದ್ದುದರಿಂದ 25.99 ಲಕ್ಷ ಹೆಕ್ಟೇರ್ ಗಳಿಗೆ ಏರಿಕೆಯಾಗಿದೆ.

### ಭತ್ತ ಖರೀದಿ 19 ಶೇಕಡಾ ಹೆಚ್ಚಳ

ಡಿಸೆಂಬರ್ 15, 2022 ರ ತನಕ FCI 417.05 ಲಕ್ಷ ಟನ್ ಭತ್ತ ಖರೀದಿಸಿದ್ದು ಹಿಂದಿನ ವರ್ಷದ ಈ ಅವಧಿಗಿಂತ 19 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. 775.72 ಲಕ್ಷ ಟನ್ ಗಳ ಖರೀದಿ ಗುರಿ ಹೊಂದಿದೆಯೆನ್ನಲಾಗಿದೆ.

### ಜೋಳ ಬಿತ್ತನೆ ಹೆಚ್ಚಳ

ರಾಬಿ ಸೀಸನ್ ಜೋಳ ಬಿತ್ತನೆ ಪ್ರದೇಶ ಇದುವರೆಗೆ 22.7 ಶೇಕಡಾ ಹೆಚ್ಚಳವಾಗಿ(ವರ್ಷದಿಂದ-ವರ್ಷಕ್ಕೆ) 13.47 ಲಕ್ಷ ಹೆಕ್ಟೇರ್ ಗಳಾಗಿವೆಯೆನ್ನಲಾಗಿದೆ. ಖಾರೀಫ್ ಬೆಳೆಯಲ್ಲಿ ಬಿತ್ತನೆ ಪ್ರದೇಶ 2.1 ಶೇಕಡಾ ಇಳಿಕೆಯಾಗಿ ಉತ್ಪಾದನೆ ಹಿಂದಿನ ವರ್ಷದ 21.95 ಮಿಲಿಯನ್ ಟನ್‌ಗಳಿಂದ 21-31 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಿತ್ತು. ರಾಬಿ ಬೆಳೆಯಲ್ಲಿ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯಿದೆ. ಇತರ ದೇಶಗಳ ದರಕ್ಕಿಂತ ಭಾರತದ ಜೋಳದ ದರ ಹೆಚ್ಚಳವಿರುವುದರಿಂದ ರಫ್ತು ಹಿಂದಿನ ವರ್ಷಕ್ಕಿಂತ 1 ಮಿಲಿಯನ್ ಟನ್ ಇಳಿಕೆಯಾಗಿ 2.5 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ.

### ಸೋಯಾಮೀಲ್ ಉತ್ಪಾದನೆ 23.5 ಶೇಕಡಾ ಹೆಚ್ಚಳ ನಿರೀಕ್ಷೆ

2022-23 ರಲ್ಲಿ ದೇಶದ ಸೋಯಾಮೀಲ್ ಉತ್ಪಾದನೆ ಹಿಂದಿನ ವರ್ಷಕ್ಕಿಂತ 23.5 ಶೇಕಡಾ ಹೆಚ್ಚಳವಾಗಿ 89.5 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಹಿಂದಿನ ವರ್ಷದ ಅಂತ್ಯದ ದಾಸ್ತಾನು ಹಾಗೂ ಅರೆಯುವಿಕೆ ಹೆಚ್ಚಳದಿಂದ ಉತ್ಪಾದನೆ ಹೆಚ್ಚಳವಿರಲಿದೆಯೆನ್ನಲಾಗಿದೆ. ದೇಶೀ ಬೇಡಿಕೆ 2.5 ಶೇಕಡಾ ಹೆಚ್ಚಳವಾಗಿ 6.70 ಮಿಲಿಯನ್ ಟನ್‌ಗಳಾಗಲಿದೆಯೆನ್ನಲಾಗಿದೆ. 2021 ಅಕ್ಟೋಬರ್‌ನಿಂದ 2022 ನವೆಂಬರ್ ವರೆಗಿನ ರಫ್ತು 2 ಮಿಲಿಯನ್ ಟನ್‌ಗಳಾಗಿ ಹಿಂದಿನ ಈ ಅವಧಿಗಿಂತ 48 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ರಫ್ತು ಮುಂದಿನ ಅವಧಿಯಲ್ಲಿ ಹೆಚ್ಚಳವಾಗಲಿದೆಯೆನ್ನಲಾಗಿದೆ.